ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿರುವ ಸಮಾಜ ಕಲ್ಯಾಣ ಸಂಸ್ಥೆಗಳ ಕಾರ್ಯನಿರ್ವಹಣೆ.

2655 (3024) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಮಾಜ ಕಲ್ಯಾಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ವಿವಿಧ ಸಂಸ್ಥೆಗಳಲ್ಲಿ ಅಧಿಕಾರೇತರರನ್ನು ಒಳಗೊಂಡ ಸಲಹಾ ಸಮಿತಿ ಅಥವಾ ಬೋರ್ಡ್ ಆಫ್ ವಿಸಿಟರ್ಸ್ ಇತ್ಯಾದಿ ನೇಮಕ ಮಾಡಲು ಇರುವ ಅಡಚಣೆಗಳೇನು;

ಆ) ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಸಂಸ್ಥೆಗಳು ಯಾವುವು;

ಇ) ಈ ಸಂಸ್ಥೆಗಳಿಗೆ ಅಧಿಕಾರೇತರ ಸದಸ್ಯರ ನಾಮಕರಣ ಆಗಿದೆಯೆ; ಈ ಸಮಿತಿಗಳ ಸಭೆ ನಡೆದಿದೆಯೇ;

ಈ) ಸಭೆಗಳು ನಡೆದಿದ್ದಲ್ಲಿ ದಾಖಲಾದ ದೂರುಗಳು ಯಾವುವು; ಅದರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಸಮಾಜ ಕಲ್ಯಾಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ಇಲಾಖೆಯ ವಿದ್ಯಾರ್ಥಿನಿಲಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಶಾಸಕರ ಅಧ್ಯಕ್ಷತೆಯಲ್ಲಿ ಅಧಿಕಾರೇತರರನ್ನು ಒಳಗೊಂಡ ಸಂದರ್ಶನ ಸಮಿತಿಯನ್ನು ರಚಿಸಲು ಸರ್ಕಾ 25 ಸದವಿ 2001 ದಿ: 22-6-2001ರಂದು ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) 1) ಹೌದು

2) ಇಲ್ಲ, ಸರ್ಕಾರದ ಆದೇಶ ಜೂನ್ ತಿಂಗಳಲ್ಲಿ ಜಾರಿಗೊಂಡಿರುವುದರಿಂದ ಸಂದರ್ಶಕರ ಸಭೆ ನಡೆದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅನುಬಂಧ

ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಹಿಂದುಳಿದ ವರ್ಗಗಳ ಇಲಾಖೆ ಅಲ್ಪಸಂಖ್ಯಾತರ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣಗಳ ವಿವಿಧ ಸಂಸ್ಥೆಗಳು ಈ ಕೆಳಕಂಡಂತಿದೆ.

ತಾಲ್ಲೂಕು ವಿವರ	ಆಶ್ರಮಶಾಲೆ	ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	ಸರ್ಕಾರಿ ಕಾಲೇಜು ವಿದ್ಯಾರ್ಥಿ ನಿಲಯ	ಖಾಸಗಿ ಸಂಸ್ಥೆಯ ಕಾಲೇಜು ವಿದ್ಯಾರ್ಥಿ ನಿಲಯ	ವಸತಿ ಶಾಲೆ	ಮೊರಾರ್ಜಿ ದೇಸಾಯಿ ವಸತಿಶಾಲೆ	ಕಲ್ಯಾಣ ಕೇಂದ್ರ
ಮೈಸೂರು	1	1	5	15	4	2	-	14
ಹೆಚ್.ಡಿ. ಕೋಟೆ	8	15	-	4	-	-	-	9
ಹುಣಸೂರು	5	13	-	3	1	-	-	5
ಕೆ.ಆರ್. ನಗರ	-	14	-	2	1	-	-	..
ನಂಜನಗೂಡು	4	18	1	3	-	-	1	14
ಪಿರಿಯಾಪಟ್ಟಣ	3	12	1	-	-	-	-	3
ಟಿ.ನರಸೀಪುರ	-	14	-	1	-	1	-	11